ಪುತ್ತೂರು ಪಟ್ಟಣಕ್ಕೆ ಒಳಚರಂಡಿ ಯೋಜನೆ

ಶ್ರೀ ಡಿ. ವಿ. ಸದಾನಂದ ಗೌಡ (ಪುತ್ತೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪುತ್ತೂರು ನಗರಕ್ಕೆ ಒಳಚರಂಡಿ ಯೋಜನೆಯನ್ನು ಹಮ್ಮಿಕೊಳ್ಳುವ ಇರಾದೆ ಸರ್ಕಾರಕ್ಕಿದೆಯೇ?

ಆ) ಹಾಗಿದ್ದಲ್ಲಿ, ಈ ಕಾಮಗಾರಿಯನ್ನು ಯಾವ ವರ್ಷದಿಂದ ಪ್ರಾರಂಭಿಸಲಾಗುವುದು?

ಶ್ರೀ ಬಿ. ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಹೌದು. ಆದರೆ ಸರ್ಕಾರವು ಹಾಲಿ ಯಾವ ಯಾವ ಪಟ್ಟಣಗಳ ಜನಸಂಖ್ಯೆ ಒಂದು ಲಕ್ಷಕ್ಕೆ ಮೇಲ್ಪಟ್ಟು ಇದೆಯೋ ಅಲ್ಲಿ ಮಾತ್ರ ಒಳಚರಂಡಿ ಯೋಜನೆಯನ್ನು ಕಲ್ಪಿಸುತ್ತಿದೆ. ಆದರೆ ಪುತ್ತೂರು ಪಟ್ಟಣದ ಹಾಲಿ ಜನಸಂಖ್ಯೆ 27, 000 ಮಾತ್ರ ಇರುವುದರಿಂದ ಈ ಪಟ್ಟಣಕ್ಕೆ ಒಳಚರಂಡಿ ವ್ಯವಸ್ಥೆ ಒದಗಿಸುವ ಬಗ್ಗೆ ಮುಂದೆ ಪರಿಗಣಿಸಲಾಗುವುದು.

ಆ) ಪುತ್ತೂರು ಪಟ್ಟಣಕ್ಕೆ ಒಳಚರಂಡಿ ಯೋಜನೆಯನ್ನು ರೂಪಿಸಲು, ಕರ್ನಾಟಕ ಜಲ ಮಂಡಳಿಯು ಸರ್ವೆ ಕೆಲಸವನ್ನು ಪ್ರಾರಂಭಿಸಿ, ಅಂದಾಜು ಪಟ್ಟಿಗಳನ್ನು ತಯಾರಿಸಿ ಸರ್ಕಾರದ ಆಡಳಿತಾತ್ಮಕ ಅನುಮೋದನೆಗೆ ಸಲ್ಲಿಸಲಾಗುವುದು. ಸರ್ಕಾರದ ಅನುಮೋದನೆ ಪಡೆದ ನಂತರ, ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಕೆ. ಜಯರಾಮಶೆಟ್ಟಿ (ಶ್ರೀ ಡಿ. ವಿ. ಸದಾನಂದಗೌಡರ ಪರವಾಗಿ) : ಮಾನ್ಯ ಅಧ್ಯಕ್ಷರೆ, ಪುತ್ತೂರು ನಗರಕ್ಕೆ ಒಳಚರಂಡಿ ಯೋಜನೆಯನ್ನು ಹಮ್ಮಿಕೊಳ್ಳುವ ಇರಾದೆ ಸರ್ಕಾರಕ್ಕೆ ಇದೆಯೇ ಹಾಗೂ ಈ ಕಾಮಗಾರಿಯನ್ನು ಯಾವ ವರ್ಷದಿಂದ ಪ್ರಾರಂಭಿಸಲಾಗುವುದು ಎಂದು ಪ್ರಶ್ನೆಯನ್ನು ನಾನು ಶ್ರೀ ಸದಾನಂದ ಗೌಡರ ಪರವಾಗಿ ಕೇಳಿದ್ದೆ. ನಮ್ಮ ಮಂತ್ರಿಗಳು ಅದಕ್ಕೆ ಉರುಟುರುಟಾದ ಉತ್ತರಗಳನ್ನು ಕೊಟ್ಟಿದ್ದಾರೆ. ಆ ಉತ್ತರ ಆದರೆ, ಹೋದರೆ ಅಕ್ಕಿ ಬೆಳೆದರೆ ಅಜ್ಜಿಗೆ ಪಟ್ಟೆ ಸೀರೆ ಎನ್ನುವಂಥ ಗಾದೆ ತರಹ ಇದೆ. ಅಲ್ಲಿ ಒಳಚರಂಡಿ ಯೋಜನೆಯನ್ನು ರೂಪಿಸಲು, ಜಲಮಂಡಳಿಯು ಸರ್ವೆ ಕೆಲಸವನ್ನು ಪ್ರಾರಂಭಿಸಿ ಹಾಗಾಗುತ್ತದೆ, ಹೀಗಾಗುತ್ತದೆ ಎಂದು ಹೇಳಿದ್ದಾರೆ. ನಾನು ಇಷ್ಟೇ ವಿನಂತಿ ಮಾಡುತ್ತಿದ್ದೇನೆ. ವಿಶ್ವ ಆರೋಗ್ಯ ದಿನಾಚರಣೆ ಲೆಕ್ಕದಲ್ಲಿ ಎರಡು ಸಾವಿರ ಇಸ್ವಿಯೊಳಗೆ ಎಲ್ಲರಿಗೂ ಆರೋಗ್ಯ ಕೊಡಬೇಕು ಎಂಬ ವಿಚಾರವನ್ನು ಭಾರತ ಸರ್ಕಾರ ಕೂಡ ಒಪ್ಪಿಕೊಂಡಿದೆ. ಈ ತರಹ ಸಣ್ಣ ಸಣ್ಣ ಪಟ್ಟಣಗಳಲ್ಲಿ ಏನು 27,000 ಎಂದು ಕೊಟ್ಟಿದ್ದೀರಲ್ಲಾ, ಆ ತರಹದ್ದಲ್ಲ, ಇಲ್ಲಿ ಜನಸಂಖ್ಯೆ ಸುಮಾರು ಐವತ್ತು ಸಾವಿರಕ್ಕಿಂತ ಜಾಸ್ತಿ ಜನಸಂಖ್ಯೆ ಇದೆ. ಎಲ್ಲಾ ಪಟ್ಟಣಗಳಿಗೆ ಕಡ್ಡಾಯವಾಗಿ ಒಳಚರಂಡಿ ವ್ಯವಸ್ಥೆಯನ್ನು ಮಾಡಿಕೊಂಡರೆ ಅದು ಕ್ಷೇತ್ರದ ಪ್ರತಿಭೆಯ ಜೊತೆ ಅಲ್ಲಿಯ ಆರೋಗ್ಯ ಕೂಡ ಒಳ್ಳೆಯದಾಗುತ್ತದೆ. ಆ ದೃಷ್ಟಿಯಲ್ಲಿ ತಮ್ಮ ಕಾರ್ಯಕ್ರಮ ಏನೆಂದು ಕೇಳಬಯಸುತ್ತೇನೆ.

ಶ್ರೀ ಬಿ. ಎನ್. ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ಸುಮಾರು 205 ಪಟ್ಟಣಗಳು ಇವೆ. ಅದರಲ್ಲಿ ಒಳಚರಂಡಿ ವ್ಯವಸ್ಥೆ ಇರುವಂಥದ್ದು ಕೇವಲ 36 ಪಟ್ಟಣಗಳಿಗೆ ಮಾತ್ರ. ಅಂದರೆ ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರುವಂಥದ್ದನ್ನು ಆಧಾರವಾಗಿಟ್ಟುಕೊಂಡು ತೆಗೆದುಕೊಂಡಿರತಕ್ಕಂಥದ್ದು. ಕೆಲವು ಭಾಗ ಇಪ್ಪತ್ತು ಪರ್ಸೆಂಟ್ ಹಣವನ್ನು ತುಂಬುವಂಥ ಚಿಂತಾಮಣಿ, ಶಿಡ್ಲಘಟ್ಟ, ವಿಜಯಪುರ ಈ ರೀತಿ ಅನೇಕ ಇವೆ. ಯಾರು ಇಪ್ಪತ್ತು ಭಾಗ ಹಣವನ್ನು ತುಂಬಿದ್ದಾರೆ ಅವರಿಗೆ ರಿಲ್ಯಾಕ್ಸ್ ಮಾಡಿರತಕ್ಕಂಥದ್ದು ಇದೆ. ಅದನ್ನು ರಿಲ್ಯಾಕ್ಸ್ ಮಾಡಿದ್ದೇವೆ. ನೀರು ಮಾತ್ರ ನೂರು ಲೀಟರ್ ಹರಿಯಲೇಬೇಕು. ನೀರು ಇಲ್ಲದೇ ಇದ್ದರೆ ನಾವು ಒಳಚರಂಡಿ ವ್ಯವಸ್ಥೆಯನ್ನು ಮಾಡುವುದಕ್ಕೆ ಆಗುವುದಿಲ್ಲ. ಅದು ಆಗಾಗ ನಿಂತು ಹೋಗುತ್ತದೆ. ಬಹಳ ಕಷ್ಟವಾಗುತ್ತದೆ. ಇದೂ ಕೂಡ ಕೇಳಿರುವಂಥದ್ದು ಕುಮದಾ ನದಿ ಮೂಲದಿಂದ ನೀರು ಕೊಡುವಂಥದ್ದು ಆದರೆ ಕುಡಿಯುವುದಕ್ಕೆ ಕೇವಲ ಎಪ್ಪತ್ತು ಲೀಟರ್ ನೀರು ಅಲ್ಲಿ ಕೊಡುವಂಥದ್ದು. ಅದಕ್ಕೆ ತಾವು ಇಚ್ಛಿಪಟ್ಟಿರುವುದರಿಂದ ತಾವು ಇಪ್ಪತ್ತು ಭಾಗದ ಹಣವನ್ನು ತುಂಬಬೇಕಾಗುತ್ತದೆ. ಐವತ್ತು ಭಾಗ ನಾವು ಹಣಕಾಸಿನ ಸಂಸ್ಥೆಯಿಂದ ತೆಗೆದುಕೊಳ್ಳುತ್ತೇವೆ. ಮೂವತ್ತು ಭಾಗ ಸರ್ಕಾರ ತುಂಬುತ್ತದೆ. ಯಾರು ಈ ಇಪ್ಪತ್ತು ಭಾಗವನ್ನು ನಗರಸಭೆ ಪುರಸಭೆಯವರು ಕೊಟ್ಟಿದ್ದಾರೆ ಅವರಿಗೆ ನಾವು ಕೊಡುವಾಗ ಈ ವ್ಯವಸ್ಥೆಯನ್ನು ಮಾಡಿಕೊಡಿ ಎಂದು ಹೇಳಿದಾಗ ಸರ್ವೆ ಮಾಡಬೇಕಾಗುತ್ತದೆ. ಸರ್ವೆ ಮಾಡಿದ ನಂತರ ಟೋಟಲ್ ಬಡ್ಜೆಟ್ ಕಾಸ್ಟ್ ಗೊತ್ತಾಗುತ್ತದೆ. ಕಾಸ್ಟ್ ಗೊತ್ತಾದ ಮೇಲೆ ಸರ್ಕಾರದವರು ಅದಕ್ಕೆ ಕೊಡಬೇಕಾದ ವಂತಿಗೆಯನ್ನು ಕೊಟ್ಟರೆ ಇದನ್ನು ತೆಗೆದುಕೊಳ್ಳಬೇಕಾಗುತ್ತದೆ. ಈ ಸಾರಿ ಇದನ್ನು ತೆಗೆದುಕೊಳ್ಳುತ್ತೇವೆ. ತೆಗೆದುಕೊಳ್ಳಬಾರದು ಎಂದು ಏನೂ ಬ್ಯಾನ್ ಇಲ್ಲ. ಇಪ್ಪತ್ತೈದು ಸಾವಿರದು, ಐವತ್ತು ಸಾವಿರದು ಕೂಡ ನಾವು ತೆಗೆದುಕೊಂಡಿದ್ದೇವೆ. ಆದರೆ ನಿಮ್ಮಲ್ಲಿ ಪುರಸಭೆಗಳಿಗೆ ಶೇಕಡಾ ಇಪ್ಪತ್ತರಷ್ಟು ಹಣ ಕಟ್ಟಲು ಶಕ್ತಿ ಇಲ್ಲ ಎಂದು ತೆಗೆದುಕೊಳ್ಳುವುದಕ್ಕೆ ಆಗಿಲ್ಲ. ತಮಗೆ ಹೇಳಬೇಕಾದರೆ ತುಮಕೂರಿನಲ್ಲೂ ಒಳಚರಂಡಿ ವ್ಯವಸ್ಥೆ ಇಲ್ಲ. ಚಿತ್ರದುರ್ಗದಲ್ಲೂ ಎಲ್ಲೋ ಹಳೆಯದು ಇದೆ. ರಾಯಚೂರಿನಲ್ಲಿ ಕೂಡ ಹಳೆಯದು ಇದೆ. ಕೋಲಾರದಲ್ಲೂ ಇಲ್ಲ. ಅಷ್ಟೇ ಅಲ್ಲ ಬಹಳಷ್ಟು ಪಟ್ಟಣಗಳಲ್ಲಿ ಇಲ್ಲ. ಜಿಲ್ಲಾ ಕೇಂದ್ರಗಳಲ್ಲಿ ಅನೇಕ ಕಡೆ ಇವೊತ್ತು ಯು.ಜಿ.ಡಿ. ಸ್ಕೀಮ್ ಆಗಿಲ್ಲ. ಕಾರಣ ಹೆಚ್ಚು ಬೆಲೆ ಆಗಿದ್ದುದಕ್ಕಾಗಿ. ಇವೊತ್ತು ಯು.ಜಿ.ಡಿ ವ್ಯವಸ್ಥೆ ನೀರಿಗಿಂತ ಎರಡು ಮೂರು ಪಟ್ಟು ಖರ್ಚು ಆಗುತ್ತದೆ. ತಾವು ಹೇಳಿದ್ದು ಒಳ್ಳೆಯದು ಯು.ಜಿ.ಡಿ ವ್ಯವಸ್ಥೆ ಎಲ್ಲಾ ಪಟ್ಟಣಗಳಿಗೆ ಆಗಬೇಕು, ಆರೋಗ್ಯದ ದೃಷ್ಟಿಯಿಂದ ಒಳ್ಳೆಯ ವ್ಯವಸ್ಥೆ ಆಗಬೇಕು ನಿಜ. ಆ ದೃಷ್ಟಿಯಿಂದಲೇ ನಾನು ಇದಕ್ಕೆ ಇಲ್ಲ ಎಂದು ಹೇಳಲಿಲ್ಲ. ಸರ್ವೆ ಕಾರ್ಯ ಮಾಡಬೇಕು, ಮಾಡುತ್ತೇವೆ. ಅದನ್ನು ತೆಗೆದುಕೊಂಡಿದ್ದೇವೆ. ನಂತರ ಪ್ರಾಜೆಕ್ಟ್ ಬಂದು ಪುರಸಭೆಗಳವರು ಇಪ್ಪತ್ತು ಭಾಗ ವಂತಿಗೆ ಕೊಡುವುದಾದರೆ ಅದನ್ನು ಮಾಡೇ ಮಾಡುತ್ತೇವೆ. ಇವೊತ್ತು ಇನ್ನೊಂದು ಇದೆ. ಎಪ್ಪತ್ತೈದು ಸಾವಿರ ಜನಸಂಖ್ಯೆ ಮೇಲ್ಪಟ್ಟು ಇರತಕ್ಕಂಥ ನೀರಿಗೆ ಅವರು ಏನೂ ವಂತಿಗೆ ಕೊಡುವಂತಿಲ್ಲ. ಪುರಸಭೆಯವರಿಗೆ ರಿಲ್ಯಾಕ್ಸ್ ಮಾಡಿದ್ದೇವೆ. ನಮ್ಮ ಸರ್ಕಾರ ಬಂದಮೇಲೆ ಇದನ್ನು ಹೇಗೆ ಮಾಡಬೇಕೆಂದು ಇದ್ದೇವೆ. ಪುರಸಭೆಗಳಲ್ಲಿ, ನಗರಸಭೆಗಳಲ್ಲಿ ಶೇಕಡಾ 20 ಭಾಗ ಕೊಡುವ ಶಕ್ತಿ ಇಲ್ಲವೆಂದು ರಿಲ್ಯಾಕ್ಸ್ ಮಾಡಬೇಕೆಂದು ಸರ್ಕಾರದ ಮುಂದೆ ಇದೆ. ಮುಂದೆ ಅದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ.